

‘ಹೌದರಿ ಇದ ಊರು ಇಳಿರಿ’ ಎಂದು ಬಾಗಿಲು ತೋರಿಸಿದ. ಪ್ರಕಾಶ ಇಳಿದು ಕಾಲೇಜು ವಿಳಾಸ ಕೇಳಿದ. ‘ಅಲ್ಲಿದೆ ನೋಡಿ’ ಎಂದು ಅಪರಿಚಿತರೊಬ್ಬರು ಕೈ ಮಾಡಿ ತೋರಿಸಿದರು. ಪ್ರಕಾಶ ಖುಷಿಯಿಂದಲೇ ಕಾಲೇಜಿನತ್ತ ಹೆಜ್ಜೆ ಹಾಕಿದ.

ಕಾಲೇಜಿನ ವರಾಂಡ ವಿಶಾಲವಾಗಿರುವುದು ಕಂಡು ಮನ ಸೆಳೆಯಿತು. ತುಂಬಾ ಹಳೆಯ ಕಾಲೇಜೆಂದು ಸಂಭ್ರಮಿಸಿದ. ದೊಡ್ಡಕಟ್ಟಡ ವಿದ್ಯಾರ್ಥಿಗಳ ಸಂಖ್ಯೆ ಕಂಡು ಒಳಗೊಳಗೆ ಮನಸ್ಸು ಹಿಗ್ಗಿ ಹೀರಿಕಾಯಿ ಆಯಿತು. ಕಟ್ಟಡದ ಎದುರು ಬರುತ್ತಿದ್ದಂತೆ ಸಂದರ್ಶನಕ್ಕೆಂದು ಬಂದವರು ಪ್ರಾಚಾರ್ಯರ ಕೋಣೆಯ ಎದುರು ನಿಂತಿದ್ದರು. ಪ್ರಕಾಶ ಎಲ್ಲರಂತೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿ, ಯಾವಾಗ ಕರೆಯುತ್ತಾರೊ ಗೊತ್ತಿಲ್ಲ, ಸಮಯ ಎಷ್ಟಾಗುತ್ತದೊ ಏನೊ? ಎನ್ನುತ್ತ ಕುಳಿತುಕೊಂಡ. ಬೇರೆ ಬೇರೆ ವಿಷಯಗಳ ಸಂದರ್ಶನ ಮುಗಿಸಿದ್ದವರು ಹೊರ ಬಂದು ‘ಇರಿ, ಸಾಯಂಕಾಲ ಲಿಷ್ಟ್ ಹಚ್ಚತೀವಿ ನಾಳೆಯೇ ರಿಪೋರ್ಟ್ ಮಾಡಕೋರಿ’ ಅಂತಿದ್ರಪ! ಎಂದು ಮಾತಾಡಿಕೊಳ್ಳುತ್ತಿದ್ದರು. ಈ ಸುದ್ದಿ ಪ್ರಕಾಶನ ಕಿವಿಗೂ ಬಿದ್ದಿತು. ಜವಾನ ಕುತೂಹಲ ತಾಳಲಾರದೆ, ‘ಏನ್ರಿ ನೀವು ಉರ್ದು ಪ್ರೊಫೆಸರ್ ಹುದ್ದೆಯ ಸಂದರ್ಶನಕ್ಕ ಬಂದೀರಿ, ಆದ್ರ ನಿಮ್ಮ ಹೆಸರು ಪ್ರಕಾಶ ಇದೆಯಲ್ರಿ’ ಎಂದು ಕೇಳಿದ. ‘ರಿಜರ್ವೇಷನ್ ಇದೆಯಲ್ರಿ ಅದಕ್’ ಎಂದು ಪ್ರಕಾಶ ಹೇಳಿದ.

‘ನೀವೇನ್ರಿ ಹಿಂದೂಗಳಾಗಿ ಉರ್ದು ಓದಿರಿ’ ಎಂದು ಜವಾನ ಸಿಡಿಮಿಡಿ ಮಾಡಿದ. ಏನಪಾ ಇವರು